ಒಂದೂ ಗೊತ್ತಿಲ್ಲ. ಅದಕ್ಕೆ ನಿಮ್ಮನ್ನು ನೋಡಿದಾಗ ತನ್ನ ತಂದೆಯ ನೆನಪಾಗಿದೆಯೆಂದು ಕಾಣುತ್ತದೆ. ಹೋಗಿ ಎತ್ಕೊಂಡುಬಿಡಿ ಜಿತೇಂದ್ರ' ಡಾಕ್ಟರು ಆದೇಶವಿತ್ತರು. ಜಿತೇಂದ್ರ ಮಗುವಿನ ಹತ್ತಿರ ಹೋದ, ಎತ್ತಿಕೊಂಡ. ಅದನ್ನೇ ನಿರೀಕ್ಷಿಸುವಂತಿದ್ದ ಮಗು ಅವನನ್ನು ತಬ್ಬಿಕೊಂಡು ಅವನ ತೆಕ್ಕೆಯಲ್ಲಿ ಭದ್ರವಾಗಿ ಕುಳಿತುಕೊಂಡಿತು.

ಮಗು ಇಂಗ್ಲಿಷ್ ಆಗಲೀ ಸ್ಪಾನಿಷ್ ಆಗಲೀ ಮಾತಾಡುತ್ತಿರಲಿಲ್ಲ. 'ಡ್ಯಾಡ್' ಎಂಬ ಒಂದು ಶಬ್ದ ಬಿಟ್ಟರೆ ಅದು ಮಾತಾಡಿದ್ದು ಏನೆಂದು ಅಲ್ಲಿ ಯಾರಿಗೂ ಅರ್ಥವಾಗಲಿಲ್ಲ. ಜಿತೇಂದ್ರನಿಗೆ ಕೂಡಾ. ಮಗು ಅವನಿಗೆ ಅಂಟಿಕೊಂಡು ಬಿಟ್ಟಿತ್ತು. ಅವನಿಗೂ ಅದರ ಮೇಲೇನೋ ಸೆಳೆತ. ಅದನ್ನು ಬಿಟ್ಟು ಬರಲು ಮನಸ್ಸು ಬಾರದು. ಮೈಯೆಲ್ಲಾ ತರಚುಗಾಯಗಳಿದ್ದುದರಿಂದ ಮಗುವಿಗೆ ಕೂಡಲೇ ಚಿಕಿತ್ಸೆ ಅಗತ್ಯವಾಗಿತ್ತು. ಅಲ್ಲಿ ಗಾಯಗೊಂಡವರನೇಕರನ್ನು ಹತ್ತಿರದ ಆಸ್ಪತ್ರೆಗೆ ಸೇರಿಸಲಾಗಿತ್ತು. ಹಾಗೆಯೇ ಒಂದು ಆಸ್ಪತ್ರೆಗೆ ಈ ಬಾಲಕನನ್ನು ಕೂಡ ಸೇರಿಸಲಾಯಿತು.

ಜಿತೇಂದ್ರ ಓಕ್ಲಹೋಮಾದಲ್ಲಿರುವ ತನ್ನ ಗೆಳೆಯ ವಿಕ್ರಮನಿಗೆ ಈ ಮಗುವಿನ ಬಗ್ಗೆ ಎಲ್ಲ ವಿವರವನ್ನೂ ತಿಳಿಸಿದ. 'ಈಗ ಆಸ್ಪತ್ರೆಯಲ್ಲಿದೆ ಕಣೋ ಈ ಕಂದ. ತುಂಬಾ ಮುದ್ದಾಗಿದೆ. ಅಲ್ಪಸ್ವಲ್ಪ ಮಾತಾಡುತ್ತೆ. ಆದರೆ ಅದರ ತೊದಲು ಮಾತು ಯಾರಿಗೂ ಅರ್ಥವಾಗಲ್ಲ. ಅದು ಯಾವ ಭಾಷೆ ಅಂತಾನೂ ಗೊತ್ತಾಗ್ತಾ ಇಲ್ಲ. ಅದು ನಿನಗಾದರೂ ಪತ್ತೆ ಮಾಡಲು ಸಾಧ್ಯವಾಗುತ್ತೋ ನೋಡೋಣ.'

'ಖಂಡಿತ ನೋಡ್ತೀನಿ. ನಾಳೆ ಬರ್ತೀನಲ್ಲ ಅಲ್ಲಿಗೆ' ಭರವಸೆಯಿತ್ತ ವಿಕ್ರಮ್. ಅವನು ಭಾರತದ ಹಲವಾರು ಭಾಷೆಗಳನ್ನು ಬಲ್ಲವನಾಗಿದ್ದ.

ಹೇಳಿದಂತೆ ಮರುದಿನ ವಿಕ್ರಮ್ ಮೆಕ್ಸಿಕೋ ನಗರದಲ್ಲಿ ಬಂದಿಳಿದ. ಜಿತೇಂದ್ರ ಉಳಿದುಕೊಂಡ ಲಾಡ್ಜ್‌ನಲ್ಲಿ ಅದೇ ಕೊಠಡಿಯಲ್ಲಿ ಅವನಿಗೂ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ವಿಕ್ರಮನ ಸ್ನಾನ ಕಾಫಿ ತಿಂಡಿ ಎಲ್ಲ ಆದ ಕೂಡಲೇ, 'ವಿಕ್ರಮ್, ನೀನು ಈಗ ವಿಶ್ರಾಂತಿ ತಗೋತೀಯಾ, ಅಥವಾ ಆಸ್ಪತ್ರೆಗೆ ಆ ಮಗುವನ್ನು ನೋಡಲು ಹೋಗೋಣ್ವಾ?' ಜಿತೇಂದ್ರ ಕೇಳಿದ.

ಮಗುವಿನ ಬಗ್ಗೆ ಜಿತೇಂದ್ರನ ಮನಸ್ಥಿತಿ ಅರಿತಿದ್ದ ವಿಕ್ರಮ್ ಉತ್ತರಿಸಿದ 'ನಾನೇನು ವಿಶ್ರಾಂತಿಗಾಗಿ ಇಲ್ಲಿಗೆ ಬಂದಿರೋದೇ? ಅದೆಲ್ಲ ಆಮೇಲೆ, ಈಗ ಆಸ್ಪತ್ರೆಗೇ ಹೋಗೋಣ.'

ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದ ಹಸುಳೆಯನ್ನು ವಿಕ್ರಮ್ ಮಾತಾಡಿಸಲು ಯತ್ನಿಸಿದ. ಅದು ಅವನೊಡನೆ ಮಾತಾಡದೆ ಜಿತೇಂದ್ರನನ್ನೇ ಬೆಟ್ಟುಮಾಡಿ ತೋರಿಸಿತು, 'ಡ್ಯಾಡ್..' ಎಂದು ಕೈ ಹಿಡಿದೆಳೆಯಿತು. ಇಬ್ಬರೂ ಮಗುವಿನೊಡನೆ ಸ್ವಲ್ಪ ಹೊತ್ತು ಕಳೆಯಲು ವೈದ್ಯರ ಅನುಮತಿ ಪಡೆದರು.

ಅರ್ಧವೃತ್ತಾಕಾರದಲ್ಲಿದ್ದ ಆಸ್ಪತ್ರೆಯ ಕಟ್ಟಡದ ಹಿಂಭಾಗದಲ್ಲೊಂದು ಪುಟ್ಟ ಉದ್ಯಾನವಿತ್ತು. ಅಲ್ಲಿ ಹುಲ್ಲುಹಾಸು, ಕಾಲ್ನಡಿಗೆಯ ಹಾದಿ ಮತ್ತು ಸುತ್ತಲೂ ಗುಂಪುಗುಂಪಾಗಿ ಟ್ಯುಲಿಪ್ ಮತ್ತು ಗುಲಾಬಿ ಗಿಡಗಳನ್ನು ಬೆಳೆಸಲಾಗಿತ್ತು. ಅವೆಲ್ಲಾ ವರ್ಣಮಯ ಹೂಗಳಿಂದ ವಿರಾಜಮಾನವಾಗಿದ್ದುವು. ವಿಕ್ರಮ್ ಮತ್ತು ಜಿತೇಂದ್ರ ಮಗುವಿನೊಂದಿಗೆ ಉದ್ಯಾನಕ್ಕೆ ಬಂದರು. ಅದಾಗಲೇ ಮಗುವಿನೊಡನೆ ಸ್ವಲ್ಪ ಸಲುಗೆ ಸಂಪಾದಿಸಿದ್ದ ವಿಕ್ರಮ್ ಗೆಳೆಯನನ್ನು ಸ್ವಲ್ಪ ಹೊತ್ತಿನ ಮಟ್ಟಿಗೆ ದೂರವಿರುವಂತೆ ಸೂಚಿಸಿದ. ಅಂತೆಯೇ ಜಿತೇಂದ್ರ ಕಾಲುದಾರಿಯಲ್ಲಿ ನಡೆಯತೊಡಗಿದ; ವಿಕ್ರಮ್ ಮಗುವಿನೊಡನೆ ಆಡುತ್ತ ಕುಳಿತುಕೊಂಡ. ಹದಿನೈದು ನಿಮಿಷಗಳ ನಂತರ ಜಿತೇಂದ್ರ ಮರಳಿ ಬಂದಾಗ ವಿಕ್ರಮನೆಂದ 'ಜಿತು, ನಿನ್ನ ಸಮಸ್ಯೆ ಪರಿಹಾರ ಆಯ್ತು. ಈ ಕಂದ ಒರಿಯಾ ಭಾಷೆ ಮಾತಾಡೋದು. ಇದರ ಹೆತ್ತವರು ಒರಿಸ್ಸಾ ಪ್ರಾಂತ್ಯದವರು. ಈಗ ಭೂಕಂಪದಿಂದಾಗಿ ಕಳೆದು ಹೋಗಿರಬಹುದು.'

'ಅದು ಹೇಗೋ ಅಷ್ಟು ಬೇಗ ಪತ್ತೆ ಮಾಡಿಬಿಟ್ಟೆ?'

'ಅಷ್ಟು ಮಾತ್ರವಲ್ಲ. ಮಗುವಿನ ಹೆಸರು ಕೂಡಾ ಕಂಡುಹಿಡಿದೆ.'

'ನೀನು ಇಲ್ಲಿಗೆ ಬಂದುದು ಸಾರ್ಥಕ ಆಯಿತು ಕಣೋ. ನಮಗಾರಿಗೂ ಸಾಧ್ಯವಾಗದ್ದನ್ನು ನೀನು ನಿಮಿಷಗಳಲ್ಲೇ ಸಾಧಿಸಿದೆ. ಹೇಗೆ?'

'ಏನೂ ಇಲ್ಲ. ನಾನು ಎಷ್ಟು ಮಾತಾಡಿಸಿದರೂ, ಏನೇ ಕೇಳಿದರೂ ಮಗು ಉತ್ತರ ಕೊಡಲಿಲ್ಲ. ಇನ್ನೇನು ಅಳಲು ಪ್ರಾರಂಭಿಸುತ್ತಿತ್ತೋ ಏನೋ. ನಾನಾಗ ಕಾರುಗಳ ಚಿತ್ರಗಳಿರುವ ಒಂದು ಪುಸ್ತಕವನ್ನು ಕೊಟ್ಟು ಇದರಲ್ಲಿ ಎಷ್ಟು ಕಾರಿದೆ ಲೆಕ್ಕ ಮಾಡು ಎಂದು ಇಂಗ್ಲಿಷಿನಲ್ಲೇ ಹೇಳಿದೆ. ಚಿತ್ರಪುಸ್ತಕವನ್ನು ನೋಡಿದ್ದೇ ತಡ, ಮಗುವಿನ ಕಣ್ಣುಗಳು ಮಿನುಗಿದುವು. ಲೆಕ್ಕ ಮಾಡಲು ತೊಡಗಿತು ಒಂದು, ಎರಡು, ಮೂರು....ಅಂತ. ಅದು ಒರಿಯಾದಲ್ಲಿ. ಮತ್ತೆ ಒರಿಯಾ ಭಾಷೆಯಲ್ಲೇ ನಿನ್ನ ಹೆಸರೇನೆಂದು ಕೇಳಿದೆ.... ಪವನ್ ಎಂದು ಉತ್ತರಿಸಿತು ಮುದ್ದಾಗಿ.'

'ಅದ್ಭುತ ಪತ್ತೇದಾರಿ ಕೆಲಸ ಕಣೋ ನಿನ್ನದು. ಈಗ ಏನ್ಮಾಡೋದು ಹೇಳು; ನನಗೆ ಒರಿಯಾ ಭಾಷೆಯ ಗಂಧಗಾಳಿಯೂ ಇಲ್ಲ. ಈ ಮಗೂನ ಕಂಡರೆ ನಂಗೇನೋ ಪ್ರೀತಿ. ಅದಕ್ಕೂ ಅಷ್ಟೇ, ನನ್ನನ್ನು ನೋಡಿದ ಕೂಡಲೇ ಡ್ಯಾಡ್ ಅಂತ ಅಂಟಿಕೊಳ್ಳುತ್ತೆ.'

'ಜಿತೂ, ಇಂಥ ಎಳೆ ಮಕ್ಕಳು ಯಾವ ಭಾಷೆಯನ್ನಾದರೂ ಬೇಗನೆ ಕಲಿತುಕೊಳ್ಳುವೆ. ಅದಕ್ಕೆ ಇಂಗ್ಲೀಷ್ ಕಲಿಸಲು ಏನೂ ಕಷ್ಟವಿಲ್ಲ ಬಿಡು'

'ಹಾಗಿದ್ದರೆ ನನ್ನ ಮನಸ್ಸಿಗೊಂದು ವಿಚಾರ ಬಂದಿದೆ ವಿಕ್ರಮ್. ನಾನು ಹೇಳೋದನ್ನು ಗಮನವಿಟ್ಟು ಕೇಳು. ಈ ಬಾಲಕನ ಅಪ್ಪ, ಅಮ್ಮ ಬದುಕಿದ್ದಾರೋ ಗೊತ್ತಿಲ್ಲ. ಬದುಕಿದ್ದರೆ ನಾನು ಆಸೆ ಪಡುವುದು ವ್ಯರ್ಥವಾಗತ್ತೆ. ಇಲ್ಲದಿದ್ದರೆ, ನಾನು ಈ ಮಗುವಿಗೆ ತಂದೆಯಾಗ್ತೀನಿ. ಇನ್ನೊಂದು ವೈಯಕ್ತಿಕ ವಿಚಾರ ವಿಕ್ರಮ್; ನನಗೆ ಮತ್ತು ಚೈತಾಲಿಗೆ ವೈದ್ಯಕೀಯ ಪರೀಕ್ಷೆಗಳನ್ನೆಲ್ಲ ಮಾಡಿಸಿ ಆಗಿದೆ. ನಮಗೆ ಮಕ್ಕಳಾಗೋ ಯೋಗ ಇಲ್ಲ. ಮಗುವೊಂದನ್ನು ದತ್ತು ಸ್ವೀಕಾರ ಮಾಡಬೇಕೆಂದು ಇತ್ತೀಚೆಗಷ್ಟೇ ನಾವು ಯೋಜನೆ ಹಾಕ್ಕೊಂಡಿದ್ದೆವು. ನಂತರ ಕೆಲವೇ ದಿನಗಳಲ್ಲಿ ಚಂಡಮಾರುತ ಹೊಡೆದು ನಾವು ಹ್ಯೂಸ್ಟನ್ ಬಿಟ್ಟು ಓಕ್ಲಹೋಮಾ ಸೇರಿದುದು ನಿನಗೆ ಗೊತ್ತೇ ಇದೆ. ಈಗ ನನಗೇನು ಸಲಹೆ ಕೊಡಬಲ್ಲೆ ನೀನು?'

'ನಿನ್ನ ನಿರ್ಧಾರ ಸರಿಯಾಗಿಯೇ ಇದೆ ಜಿತು. ಎಲ್ಲವೂ ನೀನಂದುಕೊಂಡಂತೆ ನಡೆದರೆ ಆದಷ್ಟು ಬೇಗ ಈ ಮಗು 'ಪವನ'ನನ್ನು ನೀನು ಕಾನೂನುರೀತ್ಯಾ ದತ್ತುಸ್ವೀಕಾರ ಮಾಡಬಹುದು. ಯಾವುದಕ್ಕೂ ಚೈತಾಲೀನ ಬರಮಾಡೋಣ.'

ಚೈತಾಲಿ ಹೊರಟು ಬಂದಳು. ಅವಳಿಗೆ ಜಿತೇಂದ್ರನ ಸಲಹೆ ಬಹಳ ಪ್ರಿಯವಾಗೇನೋ ಇತ್ತು. ಆದರೆ ಎರಡು ವರ್ಷ ತುಂಬಿದ ಮಗು ತನಗೆ ಹೊಂದಿಕೊಳ್ಳುತ್ತೋ ಇಲ್ಲವೋ ಎಂಬ ಆತಂಕ. ತನಗೂ ಒರಿಯಾ ಭಾಷೆ ಬಾರದು...ಅವಳು ಬಂದಾಗ ಪವನ್ ಪೂರ್ಣ ಆರೋಗ್ಯ ಪಡೆದಿದ್ದು, ಅವನನ್ನು ಅನಾಥಾಶ್ರಮವೊಂದರಲ್ಲಿ ಸೇರಿಸಲಾಗಿತ್ತು. ಅಲ್ಪಸ್ವಲ್ಪ ಆಂಗ್ಲ ಭಾಷೆ ಮಾತಾಡುವ ಅಭ್ಯಾಸವೂ ಅವನಿಗೆ ಆಗಿತ್ತು.

ಆದರೆ, ಚೈತಾಲಿಯ ಶಂಕೆ ನಿಜವೇ ಆಯಿತು. 'ಡ್ಯಾಡ್' ಎಂದು ಕರೆಯುತ್ತ ಜಿತೇಂದ್ರನ ಬಳಿ ಓಡಿ ಬರುತ್ತಿದ್ದ ಪವನ್ ಚೈತಾಲಿ ಕಡೆ ಕಣ್ಣೆತ್ತಿಯೂ ನೋಡಲಿಲ್ಲ. 'ನಿನ್ನ ಮಮ್ಮಿ ನೋಡು' ಎಂದು ಅವಳನ್ನು ಬೆಟ್ಟು ಮಾಡಿ ತೋರಿಸಿದರೆ, 'ಉಹೂಂ, ಅವಳು ನನ್ನ ಮಮ್ಮಿ ಅಲ್ಲ. ಎಲ್ಲಿ ನನ್ನ ಮಮ್ಮಿ?' ಅಂತ ಅಳಲಾರಂಭಿಸುತ್ತಿದ್ದ ಪವನ್.

'ಚೈತಾಲಿ ನೀನು ನಿರಾಶಳಾಗಬೇಡ. ತಾಯಿಯ ಪ್ರೀತಿ ಮತ್ತು ಮಗುವಿಗೆ ಪ್ರಿಯವಾದ ಆಹಾರ ಇವಿಷ್ಟನ್ನು ನೀನು ಕೊಟ್ಟರೆ ಅವನು ಖಂಡಿತ ನಿನಗೆ ಹೊಂದಿಕೊಂಡುಬಿಡುತ್ತಾನೆ. ಜಿತೇಂದ್ರನನ್ನು ಬಿಟ್ಟು ನಿನಗೇ ಅಂಟಿಕೊಂಡರೆ ಆಶ್ಚರ್ಯವಿಲ್ಲ. ಹೆಂಗಸರಿಗೆ ಮಕ್ಕಳನ್ನು ಒಲಿಸಿಕೊಳ್ಳೋ ಕಲೆ ಹೇಳಿ ಕೊಡಬೇಕೇ?' ವಿಕ್ರಮ್ ಸಾಂತ್ವನ ಹೇಳಿದ.

'ಅದೂ ಸರಿಯೇ. ಎಲ್ಲದಕ್ಕೂ ತಾಳ್ಮೆ ಇರಬೇಕು ಅಷ್ಟೇ' ಚೈತಾಲಿಯ ಮಾತುಗಳಲ್ಲಿ ಈಗ ಆತ್ಮವಿಶ್ವಾಸ ತುಂಬಿತ್ತು.

ಎರಡು ತಿಂಗಳು ಕಳೆದರೂ ಪವನನ ಹೆತ್ತವರ ಸುಳಿವು ಸಿಗಲಿಲ್ಲ. ಜಿತೇಂದ್ರ ಮತ್ತು ಚೈತಾಲಿ ಅವನನ್ನು ಕಾನೂನು ಪ್ರಕಾರ ದತ್ತುಸ್ವೀಕಾರ ಮಾಡಿಕೊಳ್ಳಲು ಯಾವ ಅಡೆತಡೆಗಳೂ ಬರಲಿಲ್ಲ.

ಹಾರ್ವೆಯ ದಾಳಿಗೆ ನಲುಗಿದ್ದ ಹ್ಯೂಸ್ಟನ್ ಈಗ ಶಾಂತವಾಗಿತ್ತು. ವಿಕ್ರಮ ತನ್ನ ಪ್ರಿಯ ಸ್ನೇಹಿತನ ಬೆನ್ನು ತಟ್ಟಿ ಹೇಳಿದ 'ಜಿತೂ, ನೀನು ಹ್ಯೂಸ್ಟನ್‌ಗೆ ಹೋಗಿ ನಿನ್ನ ಮನೆ, ಕ್ಲಿನಿಕ್ ಎಲ್ಲ ಸುವ್ಯವಸ್ಥೆಗೆ ತಂದುಬಿಡು. ಚೈತಾಲಿ ಮತ್ತು ಪವನ್ ಇಬ್ಬರನ್ನೂ ನಾನು ಆಮೇಲೆ ಕಳುಹಿಸಿ ಕೊಡ್ತೀನಿ.'